**ಓ ಎಸ್ ನಂಃ 54/2017**
**ಡಿ ಡಬ್ಲ್ಯೂ ಃ 2**

**ದಿಃ 14.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಕೆ ಆರ್ ವಕೀಲರಿಂದಃ-**

ತಾವು ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಏನಾದರೂ ತಮಗೆ ಬಂದಿತ್ತಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನನ್ನು ಈ ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವಂತೆ 5 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ನಾನು 2006 ನೇ ಸಾಲಿನಿಂದ ವಕೀಲಿ ವೃತ್ತಿಯನ್ನು ಮಾಡುತ್ತಿದ್ದೇನೆ. ನಾನು ನನ್ನ ಕಛೇರಿಯನ್ನು ನಮ್ಮ ಮನೆಯಲ್ಲಿ ಇಟ್ಟು ಕೊಂಡಿರುತ್ತೇನೆ. ನನ್ನ ಮನೆ ತಾವರೆಕೆರೆ ಗ್ರಾಮದಲ್ಲಿದೆ. ನಾನು ವಕೀಲಿ ವೃತ್ತಿಯನ್ನು ಮಾಡುತ್ತೇನೆ ಎಂದು ತೋರಿಸಲು ನನ್ನ ವಕೀಲಿ ವೃತ್ತಿಯ ಮೊಹರನ್ನು ಹೊಂದಿರುತ್ತೇನೆ. ನಾನು 1,000 ಕ್ಕಿಂತ ಹೆಚ್ಚು ದಸ್ತಾವೇಜುಗಳನ್ನು ತಯಾರು ಮಾಡಿರುತ್ತೇನೆ. ನಾನು ಯಾವುದೇ ದಸ್ತಾವೇಜನ್ನು ತಯಾರು ಮಾಡಿದರೆ ಸದರಿ ದಾಖಲಾತಿಗೆ ನನ್ನ ಮೊಹರನ್ನು ಹಾಕುತ್ತೇನೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಾವು ವಕೀಲಿ ವೃತ್ತಿಯನ್ನು ಮಾಡುತ್ತಿದ್ದೀರಿ ಎಂದು ಹೇಳಿ ಬರೆಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರ ದಾಖಲಾತಿಗೆ ತಾವು ತಮ್ಮ ಮೊಹರನ್ನು ಹಾಕಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗೆ ತಮ್ಮ ಮೊಹರನ್ನು ಹಾಕಲು ತಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಡಿ 1 ರ ದಾಖಲಾತಿಯನ್ನು ತಯಾರು ಮಾಡುವ ಸಂದರ್ಭದಲ್ಲಿ ತಮ್ಮ ಮುಂದೆ ಏನಾದರೂ ಮಾತುಕತೆ ಆಗಿದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರ ಕ್ರಯದ ಕರಾರು ಪತ್ರವನ್ನು ತಯಾರು ಮಾಡಲು ನನಗೆ 5 ನೇ ಪ್ರತಿವಾದಿಯು ಮಾಹಿತಿಯನ್ನು ನೀಡಿರುತ್ತಾರೆ. ನಿಡಿ 1 ಕ್ರಯದ ಕರಾರು ಪತ್ರವನ್ನು ತಯಾರು ಮಾಡಿಕೊಡುವಂತೆ 5 ನೇ ಪ್ರತಿವಾದಿಯು ತಮ್ಮನ್ನು ಯಾವಾಗ ಕೇಳಿದರು ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ತಯಾರು ಮಾಡುವ 2 ದಿನಗಳ ಪೂರ್ವದಲ್ಲಿ ನನ್ನನ್ನು ಕೇಳಿರುತ್ತಾರೆ. ಆದರೆ ನನಗೆ ದಿನಾಂಕ ಈಗ ನೆನಪಿಲ್ಲ. ನಿಡಿ 1 ರ ಕ್ರಯದ ಕರಾರು ಪತ್ರವನ್ನು ತಯಾರು ಮಾಡುವ ಪೂರ್ವದಲ್ಲಿ 5 ನೇ ಪ್ರತಿವಾದಿ ಮಾತ್ರ ನನ್ನ ಬಳಿ ಬಂದಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳನ್ನು ತಾವು ಯಾವಾಗ ಮೊಟ್ಟ ಮೊದಲ ಬಾರಿಗೆ ನೋಡಿದ್ದೀರಿ ಎಂದರೆ ಸಾಕ್ಷಿಯು

1 ರಿಂದ 3 ನೇ ಪ್ರತಿವಾದಿಗಳು ನಮ್ಮ ಗ್ರಾಮದ ವಾಸಿಗಳಾದ ಕಾರಣ ಅವರನ್ನು ಬಹಳ ದಿನಗಳಿಂದ ನೋಡಿರುತ್ತೇನೆ. 1 ರಿಂದ 3 ನೇ ಪ್ರತಿವಾದಿಗಳ ಅವರಿಗೆ ಸೇರಿದ ಜಮೀನನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿ ಕ್ರಯದ ಕರಾರು ಪತ್ರವನ್ನು ತಯಾರು ಮಾಡಿಕೊಡುವಂತೆ ತಮ್ಮನ್ನು ಕೇಳಿದ್ದಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಿಃ 18.07.2013 ರಲ್ಲಿ ತಾವೇನಾದರೂ 1 ರಿಂದ 3 ನೇ ಪ್ರತಿವಾದಿಗಳನ್ನು ನೋಡಿದ್ದೀರ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿರವರನ್ನು ಆ ದಿನ ನಮ್ಮ ಮನೆಯ ಬಳಿ ನೋಡಿರುತ್ತೇನೆ. ನನ್ನ ಮನೆಗೂ ಮತ್ತು ನೋಂದಣಿ ಕಛೇರಿಗೆ 400 ಮೀಟರ್ ಅಂತರ ಇದೆ. ನಿಡಿ 1 ದಾಖಲಾತಿಯ ಒಕ್ಕಣೆಯನ್ನು ನಾನು ಸಬ್ ರಿಜಿಸ್ಟರ್ ಕಛೇರಿಯ ಬಳಿ ಟೈಪ್ ಮಾಡಿಸಿರುತ್ತೇನೆ. ನಿಡಿ 1 ರ ದಾಖಲಾತಿಯನ್ನು ತಯಾರು ಮಾಡಲು ದಸ್ತಾವೇಜು ಕಾಗದವನ್ನು 5 ನೇ ಪ್ರತಿವಾದಿಯು ತಂದಿರುತ್ತಾರೆ. ಆ ಸಮಯದಲ್ಲಿ 1 ರಿಂದ 3 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಯ ಜೊತೆ ಹೋಗಿದ್ದಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಎಷ್ಟು ರೂಪಾಯಿನ ಮುಖಬೆಲೆ ತರುವಂತೆ ತಾವು 5 ನೇ ಪ್ರತಿವಾದಿಗೆ ತಿಳಿಸಿದ್ದೀರ ಎಂದರೆ ಸಾಕ್ಷಿಯು 100 ರೂಪಾಯಿನ 2 ಛಾಪಾ ಕಾಗದಗಳು ಮತ್ತು 50 ರೂಪಾಯಿನ 1 ಛಾಪಾ ಕಾಗದ ತರುವಂತೆ ತಿಳಿಸಿರುತ್ತೇನೆ. ಛಾಪಾ ಕಾಗದವನ್ನು ಯಾರ ಹೆಸರಿನಲ್ಲಿ ತರಬೇಕೆಂದು ತಾವು ತಿಳಿಸಿದ್ದೀರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 250 ರೂಪಾಯಿಗೆ ಒಂದೆ ಛಾಪಾ ಕಾಗದ ದೊರೆಯುತ್ತದೆ ಎಂದರೆ ಸರಿ. ಕ್ರಯದ ಕರಾರು ಉದ್ದೇಶಕ್ಕಾಗಿ ಛಾಪಾ ಕಾಗದ ಬೇಕೋ ಎಂದರೆ ಅದೇ ಉದ್ದೇಶವನ್ನು ನಮೂದು ಮಾಡಿ ಛಾಪಾ ಕಾಗದವನ್ನು ನೀಡುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿಯು ಮಧ್ಯಾಹ್ನ 11.30 ರಿಂದ 12.00 ಗಂಟೆ ಸಮಯದಲ್ಲಿ ನನಗೆ ಛಾಪಾಕಾಗದ ತಂದು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ತಮ್ಮ ಸಮಕ್ಷಮದಲ್ಲಿ ಪ್ರತಿವಾದಿ 1 ರಿಂದ 3 ಮತ್ತು 5 ರವರ ನಡುವೆ ಏನಾದರೂ ಮಾತುಕತೆ ಆಗಿದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ರ ಕ್ರಯದ ಕರಾರು ಪತ್ರದ ಒಕ್ಕಣೆಯನ್ನು ನಾನು 12.20 ಗಂಟೆ ಸಮಯದಲ್ಲಿ ಟೈಪ್ ಮಾಡಿಸಲು ಪ್ರಾರಂಭ ಮಾಡಿರುತ್ತೇನೆ. ಸದರಿ ಸಮಯದಲ್ಲೂ ಸಹ 1 ರಿಂದ 3 ನೇ ಪ್ರತಿವಾದಿಗಳು ಮತ್ತು 5 ನೇ ಪ್ರತಿವಾದಿಯ ನಡುವೆ ಏನಾದರೂ ಮಾತುಕತೆ ನಡೆಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಓ ಎಸ್ ನಂಃ 54/2017
ಡಿ ಡಬ್ಲ್ಯೂ ಃ 2

1 ರಿಂದ 3 ನೇ ಪ್ರತಿವಾದಿಗಳು ತಮ್ಮ ಬಳಿ ಯಾವ ಉದ್ದೇಶಕ್ಕಾಗಿ ದಾವಾ ಸ್ವತ್ತನ್ನು ಮರಾಟ ಮಡುತ್ತಾರೆ ಎಂದು ತಿಳಿಸಿದ್ದಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**